ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨ ರೂಪಾಯಿನಂತೆ ಮಾರುತ್ತಿದ್ದಾರೆ ಇದು ಸರಿಯೇ? ಮತ್ತು ಇತರ ಜಿಲ್ಲಾ ನಿರ್ಬಂಧ ತೆಗೆದುಹಾಕುವಿರಾ?

ಶ್ರೀ ಕೆ. ಎಚ್. ಪಾಟೀಲ್.—ಜೀರೆ ಜಿಲ್ಲೆಗಳಲ್ಲಿ ನಾನು ಪ್ರವಾಸಮಾಡಿದಾಗ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ಸೀಲತ್ತು ಕೊಟ್ಟಿದ್ದಾರೆ, ಹೆಚ್ಚು ಅಕ್ಕಿ ಸರಬರಾಯಾಗುತ್ತಿದೆ ಎಂದು ಹೇಳುವದು, ಧಾರವಾಡ ಜಿಲ್ಲೆಯನು ನಾನಾದರೂ ಕೂಡ ಅಲ್ಲಿಗೆ ಹೆಚ್ಚು ಕೊಡದೆ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚು ಕೊಟ್ಟು ತಾರತಮ್ಯ ಮಾಡುತ್ತಿದ್ದಾರೆ ಎಂದು ಅಲ್ಲಿನವರು ಮತ್ತು ಗದಗ ನವರು ಕೇಳಿದರು. ಅವರನ್ನ ಸಮಾಧಾನ ಮಾಡಲು ನಾನು ದಕ್ಷಿಣ ಕನ್ನಡ ಜಿಲ್ಲೆಯವರು ಹೆಚ್ಚು ಅಕ್ಕಿ ಉಪಯೋಗ ಮಾಡುವು ದರಿಂದ ಅಲ್ಲಿಗೆ ಅದನ್ನು ಹೆಚ್ಚು ಕೊಟ್ಟಿದೆ, ಧಾರವಾಡದವರಿಗೆ ಹೆಚ್ಚು ಜೋಳ ಬೇಕು. ಅದನ್ನು ಕೊಟಿ ದೆ ಎಂದು ಹೇಳಿದೆ. ಶಿವಮೊಗ್ಗ ಕಡೆ ಹೆಚ್ಚು ಅಕ್ಕಿ ಬೆಳೆಯುವವರು, ಅವರು ಅದನ್ನು ಬಚ್ಚಿಡದೆ ಜನತೆಗೆ ಕೊಡುತ್ತಿದ್ದಾರೆ, ಅದರಿಂದ ಅಂಥ ಕಡೆ ಧಾರಣೆ ಇಳಿಯುವುದು. ಆದುದರಿಂದ ಮಾನ್ಯ ಸದಸ್ಯರು ಮುಂದೆ ಬಂದು ಬಚ್ಚಿಟ್ಟಿರುವವರು ಹೊರಗೆ ತೆಗೆಯುವಂತೆ ಮಾಡಲು ಸಹಾಯಮಾಡಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ — ಫ್ರೀ ಮೂವ್‌ಮೆಂಟಿಗೆ ಅವಕಾಶ ಮಾಡಿದರೆ. ಅಂತರ ಜಿಲ್ಲಾ ಸಾಗಾಣಿಕೆಯ ನಿರ್ಬಂಧ ತೆಗೆದರೆ ಅನುಕೂಲವಾಗುವುದರಿಂದ ಹಾಗೆ ಮಾಡುವರೇ?

ಶ್ರೀ ಕೆ. ಎಚ್. ಪಾಟೀಲ್.— ಈಗಾಗಲೆ ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿದ್ದೇನೆ, ಅದು ಅವರಿಗೆ ಗೊತ್ತಿದೆ. ಇದು ಸರಕಾರದ ಪರಿಶೀಲನೆಯಲ್ಲಿದೆ.

LANDS SET APART FOR PASTURAGES IN CHIKODI TALUK

568. SRI P. P. HEGRE(Chikodi).—Will the Minister for Revenue be pleased to state,—

(*a*) the total number and Names of villages in Chikoti Taluok in Belgaum District and lands (revenue) held by Government in each of those village;

(*b*) out of these lands:
  (i) Lands fit for oultivation
  (ii) Lands unfit for cultvation.

(*c*) the total number of cattle and the area of lands set apart for pasturage in each of those villages;

(*d*) whether Government has strictly adhered to rule 97 of Mysore Land Revenue Rules 1961, in this regard if not whether there are any proposals before the Government to bring in a suitable amendment to the rules 97?

SRI N. HUTCHAMASTHY GOWDA (Minister for Revenue).—

(*a*) There are 102 villages in Chikodi Taluka. Out of these in the following 3 village Government waste lands have been notifed for disposal.

		A Gs.
(1)	Peerwadi ...	135-22
(2)	Bidrolli ...	45-22
(3)	Mugali ...	60-00

(SRI N. HUTCHAMASTHY GOWDA)

Out of 135-A 22 Gts. at Peerwadi an area of 87A. 18 Gts. has been disposed of as per Lands Grant Rules, 1969.

In other village, Government waste lands have been vested with the Village Panchayats and hence not notified for disposal.

(b) Peerwadi	Bidrolli	Mugali
A—G	A—G	A—G
125—07	45—00	60—00
10—15	—	—

(c) As per statement placed on the Table of the House*

(d) Rule 97 of the K.L.G. Rules, 1963 is strictly adhered to

ಶ್ರೀ ಪಿ. ಪಿ. ಹೆಗಡೆ.— ನಾನು ಬಿಕ್ಕೋಡಿ ತಾಲ್ಲೂಕಿನಲ್ಲಿರುವ ಪ್ರತಿಯೊಂದು ಗ್ರಾಮದಲ್ಲಿ ಸರಕಾರ ಹೊಂದಿರುವ ಜಮೀನಿನ ವಿಸ್ತೀರ್ಣ ಕೇಳಿದ್ದೆ. ಅದನ್ನು ತಿಳಿಸಿಲ್ಲ. ಆದುದರಿಂದ ಈ ಪ್ರಶ್ನೆ ಯನ್ನು ತಡೆಹಿಡಿಯಬೇಕು.

ಅಧ್ಯಕ್ಷರು.— ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ ಮಂತ್ರಿಗಳು ಉತ್ತರ ಹೇಳುವರು-

ಶ್ರೀ ಪಿ. ಪಿ. ಹೆಗಡೆ.— ಪ್ರತಿಯೊಂದು ಗ್ರಾಮದಲ್ಲೂ ಸರಕಾರದ ಮೂಲ್ಕಿ ಜಮೀನೆಷ್ಟು?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅದನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಆದರಲ್ಲಿ ಜಾನು ವಾರುಗಳ ಸಂಖ್ಯೆ, ಜಮೀನು ಸ್ಪಷ್ಟವಾಗಿ ಗೊತ್ತಾಗುವುದು. ರೂಲ್ಸ್ ಪ್ರಕಾರ ಎಷ್ಟು ಜಮೀನು ಹೆಚ್ಚಾಗಿದೆ, ಎಷ್ಟು ಕೊಡಬಹುದು ಎಂಬುದು ಪಟ್ಟಿಯಿಂದ ಗೊತ್ತಾಗುವುದು.

ಶ್ರೀ ಪಿ. ಪಿ. ಹೆಗಡೆ.— ಪ್ರತಿಯೊಂದು ಗ್ರಾಮದಲ್ಲೂ ಸರಕಾರಿ ಮೂಲ್ಕಿ ಜಮೀನೆಷ್ಟಿದೆ ಎನ್ನುವುದು ಗೊತ್ತಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ .— ಈಗ ಕೊಟ್ಟಿರುವುದು ಸರಕಾರದ ಮೂಲ್ಕಿ ಜಮೀನು, ಹಿಡುವಳಿ ಜಮೀನಲ್ಲ. ಮೂರು ಗ್ರಾಮಗಳಲ್ಲಿರುವ ಗೋಮಾಳ ಎಷ್ಟು ಎಂದು ತಿಳಿಸಿದೆ, ಅದು ಪಟ್ಟಿಯಲ್ಲಿವೆ ಹಿಂದು ಗ್ರಾಮದಲ್ಲಿದ್ದ ೧೩೫ ಎಕರೆ ೨೨ ಗುಂಟೆಯಲ್ಲಿ ೮೭ ಎಕರೆ ೧೮ ಗುಂಟೆಯನ್ನು ಹಿಂದೆ ಕೊಡಲಾಗಿದೆ. ಹೆಚ್ಚಾಗಿರುವ ಕಡೆ ಉಳಿದ ಜಮೀನನ್ನು ವಿಲೇವಾರಿ ಮಾಡಲಾಗುವುದು.

ಶ್ರೀ ಪಿ. ಪಿ. ಹೆಗಡೆ.— ನಾನು ವಿಲೇವಾರಿ ಮಾಡುವ ಪ್ರಶ್ನೆ ಕೇಳಿಲ್ಲ. ಎಷ್ಟು ಜಮೀನಿದೆ ಎಂದು ನಾನು ಕೇಳಿರುವುದು. ಆ ಮಾಹಿತಿ ಸಿಕ್ಕಿಲ್ಲ. ಫಾರೆಸ್ಟ್ ಜಮೀನನ್ನು ಸಹ ಸರಕಾರಿ ಜಮೀನು. ಈಗ ವಿಲೇವಾರಿ ಮಾಡಿರುವ ಜಮೀನು ಸರಕಾರಿ ಮೂಲ್ಕಿಯೇ ಆಥವ ಅಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ತಾವು ಸ್ವಂತ ಕಾದಾಯದ ಜಮೀನು ಕೇಳಿಲ್ಲ, ಬೇರೆ ಇರುವ ಜಮೀನು ವಿಚಾರ ಕೇಳಿದ್ದಿರಿ. ಮೂರು ಗ್ರಾಮದಲಿ ಹೆಚ್ಚಾಗಿರುವುದನ್ನು ತಿಳಿಸಿದೆ. ಉಳಿದಿರುವುದು ಪಟ್ಟಿಯಲ್ಲಿ ನೋಡಿದರೆ ಸಿಕ್ಕುವುದು. ಎರಡನೆಯ ಪ್ರಶ್ನೆಗೂ ಪಟ್ಟಿಯಲಿ ಉತ್ತರವಿದೆ.

ಶ್ರೀ ಪಿ.ಪಿ. ಹೆಗಡೆ. ಕಾಯದ ಪ್ರಕಾರ ನೂರು ಜಾನುವಾರುಗಳಿಗೆ ೩೧ ಎಕರೆ ಜಮೀನಿರಬೇಕು ಬಿಕ್ಕೋಡಿ ಗ್ರಾಮದಲ್ಲಿ ೩೨೬೬ ರಾಸುಗಳಿವೆ, ಜಮೀನು ೬೫೩ ಎಕರೆ ಇದೆ. ಲೆಕ್ಕದ ಪ್ರಕಾರ ೯೯೦ ಎಕರೆ ಜಮೀನು ಬೇಕು. ಆದಂದರಿಂದ ನಿಯಮವನ್ನು ಪಾಲಿಸಿದ್ದೀರಾ?

ಶ್ರೀ ಎನ್ ಹುಚ್ಚಮಾಸ್ತಿಗೌಡ.— ಸಾಕಷ್ಟಿಲ್ಲದಿದ್ದರೆ ಹೆಚ್ಚಿಗೆ ಜಮೀನಿದ್ದರೆ ಅದನ್ನು ವಿಶೇಷ ಮಾಡುವುದಿಲ್ಲ, ಅದನ್ನೆ ಉಳಿಸಿಕೊಳ್ಳುತ್ತೇವೆ. ಸರಕಾರಿ ಜಮೀನು ಕಡಿಮೆ ಇರುವಾಗ ಕಂಡಾಯದ ಜಮೀನಿನಲ್ಲಿ ಗೋಮಾಳಕ್ಕೆ ಕೊಡುವುದಕಾಗುವುದಿಲ್ಲ. ಇನ್ನು ಕೆಡಿಮೆಯಾಗದಹಾಗೆ ಎಚ್ಚರಿಕೆ ವಹಿಸುತ್ತೇವೆ. ಇತರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆ ಎಂಬುದು ಇದರ ಅರ್ಥ.

*Copey placed in the Karnataka legislature library vide N 55, dated 9th May 74.